## ಮುಚ್ಚುಮರೆಯೂ ಹೃದಯವಂತಿಕೆಯೂ...

ಸ್ಯಾನಿಟೈಸರ್, ಮಾಸ್ಕ್, ಪಿಪಿಇ ಕಿಟ್‌ಗಳ ಹೆಸರಿನಲ್ಲಿ ಭ್ರಷ್ಟರಿಗೆ ಹೊಸ ಹುಲ್ಲುಗಾವಲುಗಳು ಸೃಷ್ಟಿಯಾದವು. ಸೋಂಕಿತರ ಮನೆಗಳು, ಬೀದಿಗಳನ್ನು ಸೀಲ್‌ಡೌನ್ ಮಾಡುವ ಹೊಸ ದಂಧೆಗಳು ಸೃಷ್ಟಿಯಾದವು.

ಕೊರೊನಾ ನಿಯಂತ್ರಣದ ಚಟುವಟಿಕೆಗಳಿಗಾಗಿ ಸಾರ್ವಜನಿಕರಿಂದ ದೇಣಿಗೆ ಸ್ವೀಕರಿಸಲಿಕ್ಕಾಗಿ ಆರಂಭಿಸಿದ 'ಪಿ ಎಂ ಕೇರ್ಸ್ ಫಂಡ್'ಗೆ ಸಾರ್ವಜನಿಕರಿಂದ, ಉದ್ಯಮಿಗಳಿಂದ ಧಾರಾಳ ಹಣ ಹರಿದುಬಂತು. ಅದೇಕಾಲಕ್ಕೆ 'ಪಿ ಎಂ ಕೇರ್ಸ್'ನ ಅಪಾರದರ್ಶಕತೆಯ ಕುರಿತು ವಿರೋಧದ ಮಾತುಗಳೂ ಕೇಳಿಬಂದವು.

9

ರೋಗಭೀತಿಯ ಸಂದರ್ಭ ಮಾನವೀಯತೆಯ ಅನಾವರಣಕ್ಕೂ ವೇದಿಕೆಯಾಯಿತು. ಬಡಬಗ್ಗರಿಗೆ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಆಹಾರಪದಾರ್ಥಗಳನ್ನು ಉಚಿತವಾಗಿ ಒದಗಿಸಿತು. ಇಷ್ಟೇ ನೆರವಿನ ಪ್ರಮಾಣ ಖಾಸಗಿ ವಲಯದಿಂದಲೂ ದೊರೆಯಿತು.

ಕೆಲವರು ಸ್ವಯಂಪ್ರೇರಣೆಯಿಂದ ದಿನಸಿ, ತರಕಾರಿ, ಊಟದ ಪೊಟ್ಟಣಗಳನ್ನು ವಿತರಿಸಿದರು. ರೋಗಿಗಳ ಮನೆಬಾಗಿಲಿಗೆ ಔಷಧಿಗಳನ್ನು ಒದಗಿಸಿದರು. ಕೆಲವು ಹೃದಯವಂತರು ಮನೆಕೆಲಸದವರಿಗೆ ಸಂಬಳಸಹಿತ ರಜೆ ನೀಡಿದರು.

### ಆ-ರಾಮ!

ಸಾಂಕ್ರಾಮಿಕ ರೋಗದ ಭೀತಿಯ ನಡುವೆಯೂ ಮುನ್ನೆಚ್ಚರಿಕೆಗಳೊಂದಿಗೆ ಆಗಸ್ಟ್ 5ರಂದು ರಾಮಮಂದಿರ ನಿರ್ಮಾಣಕ್ಕೆ ಶಿಲಾನ್ಯಾಸ, ಭೂಮಿ ಪೂಜೆ ಕಾರ್ಯಕ್ರಮ ನಡೆಯಿತು. ಖುದ್ದು ಪ್ರಧಾನಿ ನರೇಂದ್ರ ಮೋದಿ ಅವರು ಪೂಜಾಕಾರ್ಯಕ್ರಮದಲ್ಲಿ ಭಾಗಿಯಾದರು. ಈ ಕಾರ್ಯಕ್ರಮದ ಮೂಲಕ ದೀರ್ಘಕಾಲದಿಂದ ವಿವಾದದ ಲಾಕ್‌ಡೌನ್‌ಗೆ ಸಿಲುಕಿದ್ದ ಮಂದಿರ ನಿರ್ಮಾಣಕ್ಕೆ ಚಾಲನೆ ದೊರೆಯಿತು.

## ದೇವರಿಗೂ ಲಾಕ್‌ಡೌನ್



ರಾಮಮಂದಿರ ನಿರ್ಮಾಣದ ಭೂಮಿಪೂಜೆಯಲ್ಲಿ ಪ್ರಧಾನಿ ನರೇಂದ್ರ ಮೋದಿ

ಪ್ರತಿದಿನ ಲಕ್ಷಾಂತರ ಭಕ್ತರು ಭೇಟಿ ನೀಡುತ್ತಿದ್ದ ದೇಶದ ಪ್ರಮುಖ ದೇವಸ್ಥಾನಗಳೆಲ್ಲ ಮರುಭೂಮಿಯಂತೆ ಭಣಗುಟ್ಟತೊಡಗಿದ ದಿನಗಳಿಗೆ 2020ನೇ ವರ್ಷ ಸಾಕ್ಷಿಯಾಯಿತು. ಬಹುಶಃ, ಮನುಕುಲದ ಇತಿಹಾಸದಲ್ಲಿ ದೇವರಿಗೆ ಇಂಥ ಏಕಾಂತ–ಬಿಡುವು ದೊರೆತಿರುವುದು 2020ರಲ್ಲೇ ಇರಬೇಕು.

ಆಂಧ್ರಪ್ರದೇಶದ ತಿರುಮಲದ ವೆಂಕಟೇಶ್ವರನ ದರ್ಶನಕ್ಕಾಗಿ ಈ ಹಿಂದೆ ಭಕ್ತರು ಸಾಮಾನ್ಯ ಸರದಿಯಲ್ಲಿ ದಿನಗಟ್ಟಲೆ ಕಾಯಬೇಕಿತ್ತು. ಜೇನುಗೂಡಿಗೆ ನೊಣಗಳು ಮುತ್ತಿಕ್ಕುವಂತೆ ಭಕ್ತರು ಹಗಲು–ರಾತ್ರಿ ಎನ್ನದೆ ತಿಮ್ಮಪ್ಪನ ದರ್ಶನಕ್ಕೆ ಮುಗಿಬೀಳುತ್ತಿದ್ದರು. ಆದರೆ, ಕೊರೊನಾ ವೈರಸ್ ಕಾರಣದಿಂದ 80 ದಿನಗಳವರೆಗೆ ದೇಗುಲದ ಬಾಗಿಲುಗಳು ಮುಚ್ಚಿದ್ದವು. ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿರುವ ಈ ದೇವಸ್ಥಾನ ಹಿಂದೆಂದಿಗೂ ಇಷ್ಟೊಂದು ದಿನ ಭಕ್ತರಿಗೆ ಬಾಗಿಲು ಮುಚ್ಚಿದ ಉದಾಹರಣೆ ಇರಲಿಲ್ಲ.

ವೈಷ್ಣೋದೇವಿ ಯಾತ್ರೆಯನ್ನು ಮೊಟಕುಗೊಳಿಸಲಾಯಿತು. ಸಿಖ್ಖರ ಪವಿತ್ರ ಕ್ಷೇತ್ರವಾದ ಅಮೃತಸರದ ಸ್ವರ್ಣ ಮಂದಿರ (ಗೋಲ್ಡನ್ ಟೆಂಪಲ್) ಗುರುದ್ವಾರ ಸಹ ನಿರ್ಜನವಾಗಿತ್ತು. ಕಾಶಿ, ಮಥುರಾದಲ್ಲೂ ದೇವಾಲಯಗಳು ಬಂದ್ ಆಗಿದ್ದವು. ಕೇದಾರನಾಥ ಯಾತ್ರೆಗೆ ಈ ವರ್ಷ ಸರ್ಕಾರ ಹಸಿರು ನಿಶಾನೆಯನ್ನೇ ತೋರಿಸಲಿಲ್ಲ. ರಾಜಸ್ಥಾನದ ಅಜ್ಮೀರ್‌ನ ಸೂಫಿ ಸಂತ ಮೊಯಿನುದ್ದೀನ್ ಚಿಸ್ತಿ ದರ್ಗಾ ಸಹ ಮುಚ್ಚಿತ್ತು.

10

ರಾಜ್ಯದ ಪ್ರಮುಖ ದೇವಾಲಯಗಳೂ ಕೊರೊನಾ ಕಾರಣದಿಂದ ಬಿಕೋ ಎನ್ನುವಂತಾಯಿತು. ಸದಾ ಜನರಿಂದ ಗಿಜಿಗುಡುತ್ತಿದ್ದ ಧರ್ಮಸ್ಥಳ, ಉಡುಪಿ, ಕೊಲ್ಲೂರು, ಮುರಡೇಶ್ವರ, ಗೋಕರ್ಣ, ಕಟೀಲು, ಸುಬ್ರಹ್ಮಣ್ಯ, ಸಿಗಂದೂರು, ಶೃಂಗೇರಿ, ಮೈಸೂರಿನ ಚಾಮುಂಡಿಬೆಟ್ಟ, ನಂಜನಗೂಡು, ಹೊರನಾಡು, ಶಿರಸಿ, ಬಾದಾಮಿ ಬನಶಂಕರಿ ದೇವಾಲಯಗಳು ಭಕ್ತರಿಲ್ಲದೆ, ಉತ್ಸವಗಳಿಲ್ಲದೆ ಭಣಗುಟ್ಟಿದವು. ಹೌದು, ದೇವಾನುದೇವತೆಗಳಿಗೆ ಮೂರು ತಿಂಗಳುಗಳವರೆಗೆ ಭಕ್ತರ ದರ್ಶನದ ಭಾಗ್ಯವಿರಲಿಲ್ಲ.

ದೇವಾಲಯಗಳು ಬಂದ್ ಆಗಿದ್ದರಿಂದ ಅವುಗಳ ಮೇಲೆ ಅವಲಂಬಿತವಾಗಿದ್ದ ಸಾವಿರಾರು ಕುಟುಂಬಗಳು ಜೀವನಾಧಾರವಿಲ್ಲದೆ ಪರಿತಪಿಸಿದವು. ಪುರೋಹಿತರು, ಹಣ್ಣು–ಕಾಯಿ ಮಾರುವವರು, ಓಲಗದವರು, ಕಾರ್ಮಿಕರು ಮೊದಲಾದವರ ಕುಟುಂಬಗಳು ಅದರಲ್ಲಿ ಸೇರಿದ್ದವು. ಆ ಕುಟುಂಬಗಳ ನೆರವಿಗೆ ದೇವರೂ ಬರಲಾಗದಂತಹ ಅಸಹಾಯಕ ದಿನಗಳು ಅವುಗಳಾಗಿದ್ದವು.

ಲಾಕ್‌ಡೌನ್ ಜಾರಿಯಾದ ಬಳಿಕ ಹಲವು ಜನ ಪುರೋಹಿತರು ಆನ್‌ಲೈನ್ ಮೂಲಕ ಭಕ್ತರಿಂದ ಪೂಜಾವಿಧಿಗಳನ್ನು ಮಾಡಿಸಿದರು. ಸೀಮಂತ, ಗೃಹ ಪ್ರವೇಶ, ಮಾಸಿಕ ಮತ್ತು ಶ್ರಾದ್ಧ ಕರ್ಮದಂತಹ ವಿಧಿಗಳು ಸಹ ಆನ್‌ಲೈನ್ ಮೂಲಕವೇ ನಡೆದವು. ಲಾಕ್‌ಡೌನ್ ಮುಗಿದ ಬಳಿಕ ದೇವಾಲಯಗಳನ್ನು ತೆರೆಯಲು ಸರ್ಕಾರ ಅನುಮತಿ ನೀಡಿತಾದರೂ ಭಕ್ತರ ಸಂಖ್ಯೆ ವಿರಳವಾಗಿತ್ತು. ದೇವರ ದರ್ಶನಕ್ಕೂ ಸ್ಯಾನಿಟೈಸರ್ ಹಾಕಿಕೊಂಡು, ಥರ್ಮಲ್ ಸ್ಕ್ಯಾನ್‌ಗೆ ಒಳಗಾಗಿ ಹೋಗುವಂತಾಯಿತು. ಅಂತೂ ವರ್ಷಾಂತ್ಯದ ವೇಳೆಗೆ ದೇವಾಲಯಗಳ ವಿಧಿಗಳು ಸಹಜಸ್ಥಿತಿಗೆ ಮರಳಿದವು.